ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದಲ್ಲಿ ಸಹ ಪ್ರಾಧ್ಯಾಪಕಿಯಾಗಿರುವ ಎಂ.ಎಸ್. ವೇದಾ ಕನ್ನಡದ ವಿಶಿಷ್ಟ ಲೇಖಕಿ. 1985ರಲ್ಲಿ 'ಕಾವ್ಯ ಕೂಸು' ಎನ್ನುವ ಕವನ ಸಂಕಲನದ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಪ್ರವೇಶ ಪಡೆದರು. ನಂತರ 'ಗಂಗೋತ್ರಿಯಲ್ಲಿ', 'ಬಿಳಿಲುಗಳು', 'ದಾಖಲಾಗುವುದು ಬೇಡ' ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸುವ ಹೊತ್ತಿಗೆ ಅವರನ್ನು ಸಣ್ಣಕತೆಗಳು ಆಕರ್ಷಿಸಿದ್ದವು. ಕಾವ್ಯ ಮಾರ್ಗವನ್ನು ಬಿಟ್ಟು ಗದ್ಯ ಮಾರ್ಗವನ್ನು ಹಿಡಿದ ಅವರ ಸಾಹಿತ್ಯ ಪ್ರಯಾಣ ಹೆಚ್ಚು ವೇಗ ಮತ್ತು ಕಸುವು ಪಡೆದುಕೊಂಡು ಕನ್ನಡ ಸಣ್ಣಕತೆಗಳ ಲೋಕದಲ್ಲಿ ನೆಲದಲ್ಲೇ ಸಳಸಳ ಹರಡಿಕೊಂಡ ಗಟ್ಟಿ ಬೇರಿನ ಹಾಗೆ ನೆಲೆನಿಂತಿದೆ. ಅವರ ಕತೆಗಳು ಪ್ರತಿಫಲಿತಗೊಳ್ಳುವ ಬಗೆ ಬಹಳ ಅನನ್ಯವಾದದ್ದು. 'ಜಮೀನು', 'ಜಯ', 'ಕಪ್ಪು ಕಿವಿಯ ಬಿಳಿ ಕುದುರೆಗಳು', 'ರಾಜ ಒಡೆಯರ್' ಅವರ ಕಾದಂಬರಿಗಳಾದರೆ, 'ಪ್ರೀತಿ ಮತ್ತು ಸಾವು', 'ಪಾಲು', 'ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ', 'ಮುಳ್ಳ ಮನೆಯ ಮೇಲೆ' – ಅವರ ಕಥಾಸಂಕಲನಗಳಾಗಿವೆ. ಕಥಾಸಂಕಲನಗಳು 'ಎಂ.ಎಸ್. ವೇದಾರ ಸಣ್ಣಕತೆಗಳು : ಈ ತನಕ' ಎಂಬ ಸಮಗ್ರ ಸಂಕಲನದಲ್ಲಿ ಸೇರಿವೆ. 'ಉತ್ತರ ಶಾಕುಂತಲಾ' ಎಂಬ ನಾಟಕವನ್ನೂ ಅವರು ಬರೆದಿದ್ದಾರೆ.

ವಿನಾಕಾರಣ ಸದ್ದು ಮಾಡದೆ ಗಟ್ಟಿಯಾಗಿ ತಮ್ಮ ವಿಚಾರಗಳನ್ನು ಮಂಡಿಸುವ ಅವರ ಕತೆಗಳಲ್ಲಿ ಮನುಷ್ಯ ಜೀವನದ ಆಧುನಿಕ–ಗ್ರಾಮೀಣ ಬದುಕಿನ ಮೌಲ್ಯ ಘರ್ಷಣೆಗಳು, ಮತ್ತು ಮಹಿಳಾವಾದದ ಜೀವಪರ ಸಹಭಾಗಿತ್ವದ ಹಕ್ಕಿನ ಪಾಲನ್ನು ಕೇಳುವ ಪ್ರಶ್ನೆಗಳಿವೆ. ಅವರ ಅಧ್ಯಯನಶೀಲ ಕೃತಿಗಳಲ್ಲಿ 'ಚದುರಂಗ', 'ಆರ್ದ್ರಗರ್ವದ ಹುಡುಗಿ', 'ವಚನ ಸಾಹಿತ್ಯದಲ್ಲಿ ಸತಿಪತಿ ಭಾವ', 'ವಚನಕಾರ್ತಿಯರು', 'ಬಿ. ಪುಟ್ಟಸ್ವಾಮಯ್ಯನವರ ಕಾದಂಬರಿಗಳ ಅಧ್ಯಯನ', 'ಬಿ. ಪುಟ್ಟಸ್ವಾಮಯ್ಯನವರ ನಾಟಕಗಳ ಅಧ್ಯಯನ' ಹಾಗೂ 'ಮಹಿಳಾ ಕಾವ್ಯಕಾರಣ' ಸೇರಿವೆ.

ಅವರ ಸಾಹಿತ್ಯ ಪ್ರಯಾಣಕ್ಕೆ ಮೂವತ್ತೈದು ವರ್ಷ ತುಂಬಿದೆ. 'ಮಯೂರ'ಕ್ಕಾಗಿ ಅವರು ನೀಡಿದ ವಿಶೇಷ ಸಂದರ್ಶನ ಇಲ್ಲಿದೆ.

◆ **ನಿಮ್ಮ ಸಾಹಿತ್ಯ ಪ್ರಯಾಣ ಆರಂಭವಾದ ಸಮಯ ಎಂಥದ್ದು? ಬರವಣಿಗೆಯಲ್ಲಿ ತೊಡಗಿಕೊಳ್ಳುವ ಒಂದು ಪ್ರಕ್ರಿಯೆ ನಿಮ್ಮೊಳಗಡೆ ಆರಂಭ ಆಗಿದ್ದು ಹೇಗೆ, ಯಾವ ವಯಸ್ಸಿಗೆ?**

ನಾನು ಹೀಗೆ ಹೇಳಿದರೆ ಕ್ಲೀಷೆ ಆಗಬಹುದು. ಮನೆಯಲ್ಲಿ ಸ್ವಲ್ಪ ಸಾಹಿತ್ಯಿಕ ವಾತಾವರಣ ಇತ್ತು. ನನ್ನ ತಂದೆಗೆ ಸಾಹಿತ್ಯದ ಬಗ್ಗೆ ಬಹಳ ಒಲವು ಇತ್ತು. ಅ.ನ. ಕೃಷ್ಣರಾಯರು, ತ.ರಾ. ಸುಬ್ಬರಾಯರು ಮುಂತಾದವರ ಪುಸ್ತಕಗಳನ್ನ ಓದುತ್ತಾ ಇದ್ದರು. ನನ್ನ ಅಜ್ಜಿ ಅವರ ಕಾಲಕ್ಕೇನೇ 'ಜೈಮಿನಿ ಭಾರತ', 'ಕುಮಾರವ್ಯಾಸ ಭಾರತ' ಓದಿದ್ದರು. ಮನೆಯಲ್ಲಿ ಒಂದು ಸಣ್ಣ ಗ್ರಂಥಾಲಯ ಇತ್ತು. ಅದರಲ್ಲಿ ತುಂಬಾ ಹಳೆಯ 'ಜೈಮಿನಿಭಾರತ'ದ ಪ್ರತಿ, 'ಮಾರ್ತಾಂಡ ವಿಜಯ' ಹೀಗೆ ಸಾಕಷ್ಟು ಪುಸ್ತಕಗಳು ಇದ್ದವು. ಮಿಕ್ಕಂತೆ ಚಂದಮಾಮ, ಬಾಲಮಿತ್ರ ರೀತಿಯ ಮಕ್ಕಳ ಪತ್ರಿಕೆಗಳು ಯಾವಾಗಲೂ ಓದಲು ಸಿಗುತ್ತಿದ್ದವು. ನನ್ನ ಅಜ್ಜಿ ತುಂಬಾ ಗಟ್ಟಿಗಿತ್ತಿ. ಅವರ ತಂದೆಯ ಕಾಲಕ್ಕೆ ನಮ್ಮ ಕುಟುಂಬ ಹಳ್ಳಿಯಿಂದ ಮೈಸೂರಿಗೆ ಬಂದು ನೆಲೆಸಿತ್ತು.

ನಾನು ಚಿಕ್ಕವಳಿದ್ದಾಗ ಶಾಲೆಗೆ ಹೋಗಲು ತುಂಬಾ ಹಟ ಮಾಡುತ್ತಿದ್ದೆನಂತೆ. ನನ್ನನ್ನ ಪದ್ಮಾ ಥಿಯೇಟರಿನ ಹತ್ತಿರದ ಶಿಶುವಿಹಾರಕ್ಕೆ ಸೇರಿಸಿದ್ದರು. ಕ್ಲಾಸಿಗೆ ಹೋಗಬೇಕು ಅಂದರೆ ಅಮ್ಮ ಹಣ್ಣಿನ ಅಂಗಡಿಗೆ ಕರೆದುಕೊಂಡು ಹೋಗಿ ಏನೋ ಕೊಡಿಸ್ತೀನಿ ಅಂತ ಪುಸಲಾಯಿಸಿ ದಿನಾ ತಮ್ಮ ಮನೆಗೆಲಸ ಪೂರೈಸಿ ನನ್ನನ್ನ ಸ್ಕೂಲು ಮುಟ್ಟಿಸುತ್ತಿದ್ದರು. ಹಣ್ಣಿನ ಅಂಗಡಿ ದಾಟಿದ ತಕ್ಷಣ ನನಗೆ ಕೋಪ ಬಂದು ಅಮ್ಮನ್ನ ಎಳೆದಾಡಿ ಬಿಡುತ್ತಿದ್ದೆನಂತೆ. 'ಮಾರ್ನಿಂಗ್ ಶೋ ನೋಡಕ್ಕೆ ಬಂದವರು ಅಲ್ಲೆಲ್ಲಾ ಇರ್ತಿದ್ರು.